ದಿಃ **07-07-2025** ರಂದು ಪ್ರಾಸಾ **1** ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು : ಎದುರುದಾರರ ಪರವಾಗಿ.</u>

**11).** ನನ್ನ ಜಮೀನಿನ ಸರ್ವೆ ನಂ. **110.** ಮೊದಲು ಆ ಜಮೀನು ನನ್ನ ಗಂಡನ ಹೆಸರಿನಲ್ಲಿತ್ತು. ಅವರು ತೀರಿಕೊಂಡು **27** ವರ್ಷಗಳಾಗಿವೆ. ನಮಗೆ ಇಬ್ಬರು ಮಕ್ಕಳು. ಆ ಜಮೀನು ನನ್ನ ಗಂಡನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ವಾರಸುದಾರರ ಪ್ರಮಾಣಪತ್ರ ಎಂದರೆ ಏನೆಂದು ಗೊತ್ತಿಲ್ಲ. ನನ್ನ ಗಂಡನ ಅಣ್ಣತಮ್ಮಂದಿರು ಈ ಪ್ರಕರಣದಲ್ಲಿ ಪಕ್ಷಗಾರರಾಗಿರುವುದಿಲ್ಲ. ನನ್ನ ಗಂಡ ಮತ್ತು ಅವರ ಸಹೋದರರು ಆಸ್ತಿಗಳನ್ನು ಭಾಗಮಾಡಿಕೊಂಡಿದ್ದಾರೆ ಆದರೆ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಮ್ಮ ಜಮೀನಿನಲ್ಲಿ ಕಂಬ ಹಾಕಿ ಪರಿಹಾರ ಕೊಟ್ಟಿಲ್ಲ ಆದುದರಿಂದ ಈ ಕೇಸು ಹಾಕಿದ್ದೇವೆ. ಸದರಿ ಕಂಬ ಜಮೀನಿನ ಯಾವ ಭಾಗದಲ್ಲಿದೆ ಎಂದು ತೋರಿಸಲು ನಾನು ನಕ್ಷೆ ಕೊಟ್ಟಿಲ್ಲ.

**12).** ಸರ್ಕಾರಕ್ಕೆ / ಎದುರುದಾರರ ಸಂಸ್ಥೆ ಮತ್ತು ಡಿಸಿ ಯವರಿಗೆ ನೋಟೀಸು ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಡಿಸಿ ಯವರು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಿಃ **19-3-2015** ರ ಅಧಿಸೂಚನೆಗೆ **15** ದಿನಗಳೊಳಗಾಗಿ ನಾನು ಯಾವುದೇ ತಕರಾರು ಹಾಕಿರಲಿಲ್ಲ. ದಿಃ **7-1-2015** ರಂದು ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದ ನಂತರವೂ ಸಹಾ ತಕರಾರು ಸಲ್ಲಿಸಿರಲಿಲ್ಲ.

**13).** ಎದುರುದಾರರಿಂದ ರೂ. **50,000/-** ಪರಿಹಾರವನ್ನು ಪಡೆದಿರುತ್ತೇನೆ. ಅದನ್ನು ಬರೆದುಕೊಂಡಿರುವ ಬಗ್ಗೆ ಹಾಗೂ ಉಳಿಕೆ ಪರಿಹಾರದ ಮೊತ್ತ ಎಷ್ಟು ಎಂದು ಲೆಕ್ಕ ಮಾಡಿ ಅರ್ಜಿಯಲ್ಲಿ ಬರೆಸಿಲ್ಲ. ರೂ.**50,000/-** ಪರಿಹಾರ ಸ್ವೀಕರಿಸಿದ ನಂತರ ಎದುರುದಾರರ ಸಂಸ್ಥೆಯ ವಿರುದ್ಧ ಯಾವುದೇ ಕೇಸು ಹಾಕುವುದಿಲ್ಲ ಎಂದು ನಾನು ಅರ್ಜಿ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಎನ್ ಎ ಮಾಡಿಸಿ ಜಮೀನು ಮಾರಾಟ ಮಾಡುವ ಉದ್ದೇಶ ನನಗಿರುವುದಿಲ್ಲ. ಆ ರೀತಿ ಎನ್ ಎ ಮಾಡಿಸಿ ಜಮೀನು ಮಾರಾಟ ಮಾಡಬೇಕು ಎಂದು ಸುಳ್ಳು ಮಾಹಿತಿಯನ್ನು ನಾನು ಅರ್ಜಿಯಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

**14).** ವಿದ್ಯುತ್ ಶಕ್ತಿ ತಂತಿಯಿಂದ ನಮಗೆ ತೊಂದರೆಯಾಗುತ್ತದೆ ಅಲ್ಲದೇ

ಪ್ರಾಣಿ ಪಕ್ಷಿಗಳಿಗೆ ತೊಂದರೆಯಾಗುತ್ತದೆ ಎಂದು ಸರ್ವೇ ಮಾಡಿಸಿ ಯಾರಿಂದಲೂ ವರದಿ ಪಡೆದಿಲ್ಲ. ಮನೆಯಲ್ಲಿ ಇರಲು ಆಗುತ್ತಿಲ್ಲ ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಿದ್ದು ಅದಕ್ಕೆ ತೊಂದರೆಯಾಗುತ್ತಿದೆ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಜಮೀನು ಮಾರುವ ಉದ್ದೇಶ ನನಗೆ ಈಗ ಇರುವುದಿಲ್ಲ.

**15).** ಹೈನುಗಾರಿಕೆ ತರಬೇತಿಯನ್ನು ನಾನು ಪಡೆದಿಲ್ಲ. ನಾನು ಪರಿಹಾರ ಪಡೆಯಲು ಅರ್ಹಳಲ್ಲ ಹಾಗೂ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರಿಯಾದ ಪಕ್ಷಗಾರರನ್ನು ಅರ್ಜಿಯಲ್ಲಿ ಸೇರಿಸಿಲ್ಲವಾದ ಕಾರಣ ನಾನು ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಜಮೀನಿನಲ್ಲಿ ಗಿಡ-ಮರ ಇರುವ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿಲ್ಲ. ಹೊಂಗೆ, ಬೇವು ಮರಗಳನ್ನು ಕಡಿದಿದ್ದಾರೆಂದು ಸಾಕ್ಷಿದಾರರು ನುಡಿದಿರುತ್ತಾರೆ. ಜಮೀನಿನ ಫಲವತ್ತತೆ ಬಗ್ಗೆ ದೃಢಪತ್ರ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಊರಿನವರ ಮಾತು ಕೇಳಿ ಎದುರುದಾರರ ವಿರುದ್ಧ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

(ಚಂದ್ರಶೇಖರ ಸಿ)
ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೊಪ್ಪಳ.**